money ಇದರಿಂದ ಸರ್ಕಾರಕ್ಕೆ ಏನು ಹಣ ಉಳಿತಾಯವಾಗಿದೆ ನೋಡಿ, ಸರ್ಕಾರಕ್ಕೆ ಏನೂ ಲಾಭವಿಲ್ಲ. ಆಗ ಯಾವಾಗಲೊ ಒಂದು ಸಾರಿ ಹೇಳಿದ್ದಕ್ಕೆ ಇದು ನಡೆದುಕೊಂಡು ಬರುತ್ತಿದೆ, ಅದನ್ನು ದಯವಿಟ್ಟು ತೆಗೆದು ಹಾಕಿದರೆ ಇದರಲ್ಲಿ ನಿಮಗೆ 100% achievement ಬರುತ್ತದೆ. ಅದಕ್ಕೆ ನೀವು no water no money scheme ತೆಗೆದು, ಎಲ್ಲದಕ್ಕೂ ದುಡ್ಡು ಕೊಟ್ಟರೂ ಕೂಡ ಸರ್ಕಾರಕ್ಕೆ ಲಾಸ್ ಆಗುವುದಿಲ್ಲ, no water no money ನಿಂದ ಸರ್ಕಾರಕ್ಕೆ ಏನೂ ಸೇವಿಂಗ್ ಇಲ್ಲ, ದಯವಿಟ್ಟು ಇದನ್ನು ತೆಗೆಯಿರಿ, 100% implementation ಆಗುತ್ತದೆ.

ಶ್ರೀ ಡಿ. ಸುಧಾಕರ : ಸನ್ಮಾನ್ಯ ಸದಸ್ಯರುಗಳೇನು ಸಲಹೆಗಳನ್ನು ಕೊಟ್ಟಿದ್ದಾರೆ, ಅದನ್ನು ಖಂಡಿತವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಚಿಕ್ಕನಗೌಡರು ಇಲ್ಲ. ಸಿ.ಟಿ. ರವಿಯವರು ತಮ್ಮ ಪ್ರಶ್ನೆ ಕೇಳುವುದು.

ಕ್ಯಾನ್ಸರ್, ಕಿಡ್ನಿ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಯ ಚಿಕಿತ್ಸೆ ಬಗ್ಗೆ

119 (826) ಶ್ರೀ ರವಿ ಸಿ.ಟಿ (ಚಿಕ್ಕಮಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರಾಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್, ಕಿಡ್ನಿ ಮತ್ತು ಹೃದಯಕ್ಕೆ ಸಂಬಂಧಿಸಿದ ರೋಗಿಗಳಿಗೆ ಬಡವರಿಗೆ ಜಿಲ್ಲಾ ಕೇಂದ್ರಗಳಲ್ಲಿ ಚಿಕಿತ್ಸೆ ಲಭ್ಯವಿದೆಯೇ;

ಆ) ಲಭ್ಯವಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿವೆ; (ವಿವರ ನೀಡುವುದು);

ಇ) ಜಿಲಾ ಕೇಂದ್ರಗಳಲ್ಲಿ ಚಿಕಿತ್ಸೆ ನೀಡಲು ಸರ್ಕಾರದ ಮುಂದಿರುವ ಯೋಜನೆಗಳೇನು;

ಈ) ಈ ಚಿಕಿತ್ಸೆಗಾಗಿ ಬಡವರಿಗೆ ಉಚಿತ ಚಿಕಿತ್ಸೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಲು ಉದ್ದೇಶಿಸಿದೆಯೇ;

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮತ್ತು ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಪ್ರಸ್ತುತ 17 ಜಿಲ್ಲಾ ಆಸ್ಪತ್ರೆಗಳು, ಬೆಂಗಳೂರಿನಲ್ಲಿ 3 ಸಾರ್ವಜನಿಕ ಆಸ್ಪತ್ರೆಗಳು ಹಾಗೂ 2 ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಲ್ಲಿ ಸದರಿ ಕಾಯಿಲೆಗಳ ತಪಾಸಣೆಗಾಗಿ ತಜ್ಞ ವೈದ್ಯರ ಸೇವೆ ಲಭ್ಯವಿದೆ. ರೋಗ ದೃಢೀಕರಣ (ಡಯಾಗ್ನಾಸೀಸ್) ನಂತರ, ಸ್ಪೆಷಾಲಿಟಿ ಸೌಲಭ್ಯ ಇರುವ ಸರ್ಕಾರಿ ಆಸ್ಪತ್ರೆಗಳಿಗೆ ರೋಗಿಗಳನ್ನು ರೆಫರ್ ಮಾಡಲಾಗುವುದು.

ಗುಲ್ಬರ್ಗಾ ಕಂದಾಯ ವಿಭಾಗದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಯಾದಗಿರ್, ಬಳ್ಳಾರಿ ಈ 6 ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರಿಗೆ ಕ್ಯಾನ್ಸರ್, ಕಿಡ್ನಿ, ಹೃದಯ ಮುಂತಾದ ಮಾರಣಾಂತಿಕ ಕಾಯಿಲೆಗಳ ಚಿಕಿತ್ಸೆಗಾಗಿ "ವಾಜಪೇಯಿ ಆರೋಗ್ಯಶ್ರೀ" ಎಂಬ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಅದರಡಿ ಪ್ರತಿ ಕುಟುಂಬಕ್ಕೆ ಫ್ಯಾಮಿಲಿ ಫ್ಲೋಟರ್ ಆಧಾರದ ಮೇಲೆ ರೂ.1.50 ಲಕ್ಷಗಳಿಂದ ರೂ. 2.00 ಲಕ್ಷಗಳವರೆಗೆ ಗುರುತಿಸಲ್ಪಟ್ಟ ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಇ) ಮತ್ತು ಈ) ಈ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಸೂಪರ್ ಸ್ಪೆಷಾಲಿಟಿ ಸೌಲಭ್ಯ ಇರುವ ಸರ್ಕಾರಿ ಸ್ವಾಯತ್ತ ಸಂಸ್ಥೆಗಳಿಗೆ ಕಳುಹಿಸಿದಾಗ ಬಡತನ ರೇಖೆಗಿಂತ ಕೆಳಗಿರುವ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುವ ಸೌಲಭ್ಯವಿದೆ.

ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯು ಪ್ರಾಥಮಿಕ ಹಾಗೂ ದ್ವಿತೀಯ (Primary & Secondary) ಹಂತದ ಆರೋಗ್ಯ ಸೌಲಭ್ಯವನ್ನು ನೀಡುವ ಜವಾಬ್ದಾರಿ ಹೊಂದಿವೆ. ಮಾರಣಾಂತಿಕ ಕಾಯಿಲೆ ಗಳಿಗೆ ಚಿಕಿತ್ಸೆ ಸೌಲಭ್ಯ ಒದಗಿಸುವುದು ಸೂಪರ್ ಸ್ಪೆಷಾಲಿಟಿ (Tertiary) ಹಂತದ ಚಿಕಿತ್ಸೆ ವ್ಯಾಪ್ತಿಯಡಿ ಬರುತ್ತದೆ. ಅಂತಹ ಸೂಪರ್ ಸ್ಪೆಷಾಲಿಟಿ ಸೌಲಭ್ಯವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಜಿಲ್ಲಾ ಆಸ್ಪತ್ರೆಯಲ್ಲಿ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

(7-20 PM)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 119 (826)

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಮೊದಲನೆ ಪ್ರಶ್ನೆ; ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್ ಕಿಡ್ನಿ ಮತ್ತು ಹೃದಯಕ್ಕೆ ಸಂಬಂಧಿಸಿದ ರೋಗಿಗಳಿಗೆ ಬಡವರಿಗೆ ಜಿಲ್ಲಾ ಕೇಂದ್ರಗಳಲ್ಲಿ ಚಿಕಿತ್ಸೆ ಲಭ್ಯವಿದೆಯೇ. ಅವರು ಅದಕ್ಕೆ ಕೊಟ್ಟಿರುವಂತಹ ಉತ್ತರ; ತಪಾಸಣೆ ಮಾಡಿ super speciality ಆಸ್ಪತ್ರೆಗಳಿಗೆ ಕಳುಹಿಸಿಕೊಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಯಾವ ಬಡವ ಬಸ್ ಚಾರ್ಜಿಗೂ ದುಡ್ಡಿಲ್ಲದಿರುವವನು super speciality Hospital ನಲ್ಲಿ ಸರ್ಕಾರದ ನೆರವಿಲ್ಲದೆ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯುವುದಕ್ಕೆ ಸಾಧ್ಯವಿದೆ? ಹಾಗಿದ್ದರೆ ಬಡವನ ಕಾಯಿಲೆಗೆ ಔಷಧಿಯೇ ಇಲ್ಲವೇ? ಬಡವನ ಕಾಯಿಲೆಗೆ ಸಾವೇ ಪರಿಹಾರವೇ? ಸಾವು ಪರಿಹಾರವಲ್ಲವೆನ್ನುವುದಾದರೆ ಜಿಲ್ಲಾ ಕೇಂದ್ರಗಳಲ್ಲಿ ಚಿಕಿತ್ಸೆ ಕೊಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 18 ಜಿಲ್ಲಾ ಆಸ್ಪತ್ರೆಗಳಿವೆ, ಜೊತೆಗೆ ಬೆಂಗಳೂರಿನಲ್ಲಿ, ರಾಯಚೂರಿನಲ್ಲಿ, ಚಿಕ್ಕಮಗಳೂರು, ಉಡುಪಿ, ಎಲ್ಲಾ ಸೇರಿ 11 ಆಸ್ಪತ್ರೆಗಳಿವೆ. ನಮ್ಮ ಆರೋಗ್ಯ ಇಲಾಖೆಯಲ್ಲಿ Primary and secondary ಅಂದರೆ, ಇವತ್ತು ಕ್ಯಾನ್ಸರ್ ಆಗಿರಬಹುದು, ಟಿಬಿ ಆಗಿರ ಬಹುದು, ಬೇರೆ ಬೇರೆ ಕಾಯಿಲೆಗಳು ಬಂದರೂ super speciality ಆಸ್ಪತ್ರೆಗಳಿಗೆ ಕಳುಹಿಸಬೇಕೆಂದು ಉತ್ತರವನ್ನು ಕೊಟ್ಟಿದ್ದೇವೆ. ಇವತ್ತು Primary and secondary ಆಗಿರಬಹುದು, ಆ ಹಂತದಲ್ಲಿರುವ ರೋಗಿಗಳಿಗೆ ನಮ್ಮ ಆಸ್ಪತ್ರೆಗಳಲ್ಲಿ ಮಾತ್ರ ಚಿಕಿತ್ಸೆ ಕೊಡುವುದಕ್ಕೆ ಸೌಲಭ್ಯಗಳು ಸಿಗುತ್ತಿದೆ. ನಂತರ major diseases ಬಂದರೆ, ನಾವು super speciality ಆಸ್ಪತ್ರೆಗೆ ಕಳುಹಿಸಿಕೊಡುತ್ತೇವೆ. ಆದರೆ ನಮ್ಮಲ್ಲಿ ಈಗ ಏನಾಗಿದೆ ಎಂದರೆ, ಇವತ್ತು ಆ ಎಲ್ಲಾ super speciality ಆಸ್ಪತ್ರೆಗಳು ಮೆಡಿಕಲ್ ಎಜುಕೇಷನ್ ಇಲಾಖೆಗೆ ಸೇರುತ್ತದೆ. ಅದಕ್ಕಾಗಿ ಈ ರೀತಿ ಆಗಬಾರದೆಂದು ಪ್ರಥಮ ಬಾರಿಗೆ, ಕರ್ನಾಟಕದ 6 ಜಿಲ್ಲೆಗಳಾದ ರಾಯಚೂರು, ಗುಲ್ಬರ್ಗಾ, ಬೀದರ್, ಕೊಪ್ಪಳ್, ಯಾದಗಿರಿ ಮತ್ತು ಬಳ್ಳಾರಿಯಲ್ಲಿ ವಾಜಪೇಯಿ "ಆರೋಗ್ಯ ಶ್ರೀ" ಎನ್ನುವ ಹೊಸ ಯೋಜನೆಯನ್ನು ನಾವು ತಂದಿದ್ದೇವೆ.

ಮುಂಬರುವಂತಹ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಇಡೀ ರಾಜ್ಯಕ್ಕೆ ಅದನ್ನು ತೆಗೆದುಕೊಂಡು ಹೋಗುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ನಮ್ಮ ವಾಜಪೇಯಿ ಆರೋಗ್ಯ ಶ್ರೀ ಸ್ಕೀಮ್‌ನಲ್ಲಿ ಸುಮಾರು ಎರಡು ಲಕ್ಷ ರೂ. ಗಳವರೆಗೆ ಒಂದು ಕುಟುಂಬದಲ್ಲಿ ಐದು ಜನರಿಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಐದು ಜಿಲ್ಲೆಗಳಲ್ಲಿ ನಡೆಯುತ್ತಿದೆ. ಮುಂಬರುವಂತಹ ದಿನಗಳಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಈ ಯೋಜನೆ ಬಂದಂತಹ ಸಂದರ್ಭದಲ್ಲಿ ಎಲ್ಲರಿಗೂ ಅನುಕೂಲವಾಗಬೇಕೆಂಬ ಉದ್ದೇಶದಿಂದ ವಾಜಪೇಯಿ ಆರೋಗ್ಯ ಶ್ರೀ ಸ್ಕೀಮ್ ರಾಜ್ಯದಾದ್ಯಂತ ವಿಸ್ತರಣೆ ಆಗುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಒಂದುವರೆ ಲಕ್ಷ ಅಪ್ರಾಕ್ಸಿಮೇಟ್ ಖರ್ಚಾಗಬಹುದು ಎಂದು ನಾವು ಇಟ್ಟುಕೊಂಡಿದ್ದೇವೆ. ಇನ್ನು 50,000 ರೂ. ಕೂಡ ಅದಕ್ಕೆ ಜೋಡಿಸಿ ಎರಡು ಲಕ್ಷ ರೂ.ಗಳವರೆಗೆ ನಾವು ಇಟ್ಟುಕೊಂಡಿದ್ದೇವೆ. ಪುನಃ ಅವರಿಗೆ ಹೋಗಿ ಬರುವ ಸಾರಿಗೆ ವೆಚ್ಚ ಕೂಡ ಒಂದು ಸಾವಿರ ರೂಪಾಯಿ ಕೊಡುತ್ತಿದ್ದೇವೆ. ಎಲ್ಲರಿಗೂ ಸೌಲಭ್ಯ ಸಿಗುತ್ತಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಮುಂಬರುವ ದಿನಗಳಲ್ಲಿ ಎಂದು ಹೇಳಿದ್ದಾರೆ. ಅದಕ್ಕೇನಾದರೂ ಕಾಲಮಿತಿ ಇದೆಯೇ? ಮುಂಬರುವ ದಿನಗಳು ಎಂದರೆ ಅದಕ್ಕೆ ಎಷ್ಟು ವರ್ಷ ಕಾಯಬೇಕು, ಅಲ್ಲಿಯವರೆಗೆ ಆ ಕಾಯಿಲೆಗೆ ಪರಿಹಾರ ಇಲ್ಲವೇ? ಅದಕ್ಕೆ ಕಾಲಮಿತಿ ಏನು? ಮಾನವೀಯ ಹಿನ್ನೆಲೆಯಲ್ಲಿ ಯೋಚನೆ ಮಾಡಬೇಕಾಗಿರುವುದು, ನಮ್ಮ ಬಳಿ ಅವರು estimate copy ತೆಗೆದುಕೊಂಡು ಬನ್ನಿ ಎಂದರೆ, ಅವರು estimate ತೆಗೆದುಕೊಂಡು ಬರಲಿಕ್ಕೆ ತಪಾಸಣೆ ಮಾಡಿಸುವುದಕ್ಕೆ ಬೆಂಗಳೂರಿಗೆ ಬರಬೇಕು. ಬಸ್ ಛಾರ್ಜ್‌ಗೂ ದುಡ್ಡು ಇರುವುದಿಲ್ಲ. ಮಾನ್ಯ ಆರೋಗ್ಯ ಸಚಿವರು ಒಳ್ಳೆಯ ಮಾತನ್ನು ಹೇಳಿದ್ದಾರೆ. ಮುಂಬರುವ ದಿನಗಳಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ವಿಸ್ತರಣೆ ಮಾಡುತ್ತೇವೆ, ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು ವಿಸ್ತರಿಸುತ್ತೇವೆಂದು ಹೇಳಿದ್ದಾರೆ ತುಬಾ ಸಂತೋಷ. ಮುಂಬರುವ ಎನ್ನುವುದಕ್ಕೆ ಕಾಲಮಿತಿ ಇರಬೇಕು. ಅದಕ್ಕೊಂದು ಕಾಲಮಿತಿ ಯಾವಾಗ ಎಂದು ಹೇಳಿಬಿಡಿ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮುಂಬರುವಂತಹ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಶೀಘ್ರದಲ್ಲಿ ಇಂತಹ ಯೋಜನೆಯನ್ನು ತರುತ್ತೇನೆಂದು ಮಾತು ಕೊಟ್ಟಿದ್ದಾರೆ.

ಆ) ತಡೆಹಿಡಿಯಲಾದ ಪ್ರಶ್ನೆ :

ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ: 46 (736)

ಆಶ್ರಯ ಶಾಲೆಗಳ ಸಮಸ್ಯೆಗಳು

736 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ಆಶ್ರಯ ಶಾಲೆಗಳು ಎಷ್ಟು ಮತ್ತು ಯಾವುವು;

ಆ) ಈ ಆಶ್ರಯ ಶಾಲೆಗಳಲ್ಲಿ, ಒದುತ್ತಿರುವ ಮಕ್ಕಳ ಸಂಖ್ಯೆ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಹಾಗೂ ಇವರಿಗೆ ನಿಗಧಿ ಪಡೆಸಿರುವ ವೇತನ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಣೆ ನೀಡುವುದು;

ಇ) ಈ ಆಶ್ರಯ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ, ಅಗತ್ಯ ವಸ್ತುಗಳ ಪೂರೈಕೆ (ಆಹಾರ, ಪಠ್ಯಪುಸ್ತಕ, ಸಮವಸ್ತ್ರ, ಇತ್ಯಾದಿಗಳನ್ನು ಯಾವ ರೀತಿ ಮಾಡಲಾಗುತ್ತಿದೆ ಮತ್ತು ಇವುಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಪಾತ್ರವೇನು;

ಈ) ಈ ಪ್ರಕ್ರಿಯೆಯನ್ನು ಹೊರ ಮಾನವ ಸಂಪನ್ನಮೂಲ ಸರಬರಾಜು ಮುಖಾಂತರ (ಹೊರಗುತ್ತಿಗೆ) ಮತ್ತು ಅಗತ್ಯ ವಸ್ತುಗಳ ಪೂರೈಕೆಯನ್ನು ಟೆಂಡರ್ ಮುಖಾಂತರ ಖಾಸಗಿಯವರಿಗೆ ಮಾಡಲಾಗಿದ್ದರೆ ಯಾರಿಗೆ ಮತ್ತು ಹೇಗೆ ನೀಡಲಾಗಿದೆ. (ವಿವರ ನೀಡುವುದು);

ಉ) ಹುಣಸೂರು ತಾಲ್ಲೂಕಿನ ಆಶ್ರಯ ಶಾಲೆಗಳಿಗೆ ಆಡಳಿತಾತ್ಮಕ ನಿರ್ವಹಣೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನ ಎಷ್ಟು ಮತ್ತು ಯಾವುದಕ್ಕೆ ಖರ್ಚು ಮಾಡಲಾಗಿದೆ. (ಸಂಪೂರ್ಣ ವಿವರ ನೀಡುವುದು)?